

# ‘ಮಾಡೆಲಿಂಗ್ ಸೌಂದರ್ಯದ ಮೇಲಷ್ಟೇ ನಿಂತಿಲ್ಲ

ಕೊಮಿಕಾ ಸಿನ್ಹಾ, ಕುಮಾರ್ ಫಿಲ್ಮ್ ಫ್ಯಾಕ್ಟರಿ ಕಂಪನಿಯು ಆಯೋಜಿಸುತ್ತಿರುವ ‘ವುಮೆನ್ಸ್ ಡೇ ಔಟ್ ವಿಥ್ ಫ್ಯಾಷನ್’ ಕಾರ್ಯಕ್ರಮದ ರಾಯಭಾರಿ. ಈಚೆಗೆ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ‘ಸುಧಾ’ ಪ್ರತಿನಿಧಿಗೆ ಮಾತಿಗೆ ಸಿಕ್ಕ ಅವರು ತಮ್ಮ ಮಾಡೆಲಿಂಗ್ ಜರ್ನಿಯ ಬಗ್ಗೆ ಮಾತನಾಡಿದ್ದಾರೆ.

■ ಶಶಿಕುಮಾರ್ ಸಿ.

ನೀಳಕಾಲುಗಳ, ಮಾದಕ ನೋಟದ ಚೆಲುವೆ ಕೊಮಿಕಾ ಸಿನ್ಹಾ ಮೂಲತಃ ಬಿಹಾರದವರು. ಸದ್ಯ ಅವರ ವಾಸ ಬೆಂಗಳೂರಿನಲ್ಲಿ. 23 ವರ್ಷಗಳ ಈ ಸುಂದರಿ ವೃತ್ತಿಯ ಜೊತೆಗೆ ಪ್ರವೃತ್ತಿಯಾಗಿ ಆಯ್ಕೆ ಮಾಡಿಕೊಂಡಿರುವುದು ಫ್ಯಾಷನ್ ಲೋಕದ ಆಕರ್ಷಣೆಯಾದ ಮಾಡೆಲಿಂಗ್ ಕ್ಷೇತ್ರವನ್ನು.

ಅರೆಬರೆ ಕನ್ನಡ ಮಾತನಾಡುವ ಅವರು ಹೆಮ್ಮೆಯಿಂದಲೇ ‘ನಾನೂ ಕನ್ನಡತಿಯೇ’ ಎನ್ನುತ್ತಾರೆ. ಅವರದು ಉತ್ತಮ ವಾಕ್‌ಚಾತುರ್ಯ. ಶಿಕ್ಷಣದ ವಿಚಾರಕ್ಕೆ ಬರೋದಾದರೆ, ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ಕೋರ್ಸ್‌ನಲ್ಲಿ ಪದವಿ ಪಡೆದಿರುವ ಆಕೆ, ಬಹುರಾಷ್ಟ್ರೀಯ ಕಂಪನಿಯಾದ ‘ಕಾಗ್ನಿಜೆಂಟ್ ಟೆಕ್ನಾಲಜಿ ಸಲ್ಯೂಷನ್ಸ್’ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಸಾಫ್ಟ್‌ವೇರ್ ಎಂಜಿನಿಯರ್ ಕೆಲಸ ಲಕ್ಷಾಂತರ ರೂಪಾಯಿ ಸಂಬಳದ್ದು. ಅಷ್ಟೇ ಒತ್ತಡವೂ ಆ ಕೆಲಸದಲ್ಲಿರುತ್ತದೆ. ಒತ್ತಡದಲ್ಲಿದ್ದರೂ ವೃತ್ತಿಯ ಜೊತೆಗೆ ಪ್ರವೃತ್ತಿಯ ಜೊತೆಗೆ ಮಾಡೆಲ್ ಆಗಿಯೂ ಕೊಮಿಕಾ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಈ ಬಗ್ಗೆ ಪ್ರಶ್ನಿಸಿದರೆ, ‘ಅನಿವಾರ್ಯವಾಗಿ ಸಾಫ್ಟ್‌ವೇರ್ ಎಂಜಿನಿಯರ್ ಆದೆ. ನನ್ನ ಕನಸು ನನಸಾಗಿಸಲು ಮಾಡೆಲಿಂಗ್